ಶ್ರೀ ಬಸವರಾಜ ರಾಯರೆಡ್ಡಿ:- ಸಭೆ ನಡೆಸಬೇಕಾದರೆ ಒಂದು ಸಂತೋಷ ಇರಬೇಕು. ಅಂತಹ ವಾತಾವರಣ ಇಲ್ಲಿ ಇಲ್ಲ. ಬೆಳಿಗ್ಗೆಯಿಂದ ಕುಳಿತಿದ್ದೇವೆ.

(ಗೊಂದಲ)

SRI QUMURAL ISLAM:- Before concluding you please take up non-official resolution.

ಉಪಾಧ್ಯಕ್ಷೀಣೆಯವರು:- ಸಭೆಯನ್ನು ಅಡ್ಜರ್ನ್ ಮಾಡುವುದಕ್ಕೆ ಮುಂಚೆ ಶಿಕ್ಷಣ ಮಂತ್ರಿಗಳು ಏನೋ ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ನನಗೂ ಮಾತನಾಡಲಿಕ್ಕೆ ಇದೆ.

ಶ್ರೀ ಬಿ. ಎಚ್. ಬನ್ನಿಕೋಡ್:- ಖಾಸಗಿ ಕಾರ್ಯಕಲಾಪಗಳು ಬೇರೆ ಇವೆ....

ಶ್ರೀ ವಾಟಾಳ್ ನಾಗರಾಜ್:- ತಮ್ಮ ಮೂಲಕ ಎಲ್ಲಾ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ, ಅವರನ್ನು ಆ ಕಡೆ ಕರೆದುಕೊಳ್ಳಿ. ನಾವು ಈ ಹೊಡೆತ ಸಹಿಸಿಕೊಂಡು ಸಾಕಾಗಿದೆ.

ಮಂತ್ರಿಗಳ ಹೇಳಿಕೆ.

ಹೆಗ್ಗಡದೇವನ ಕೋಟೆಯಲ್ಲಿ ಒಬ್ಬ ಮಹಿಳೆ ನೀರಿಲ್ಲದೆ ಸತ್ತಿರುವ ವಿಚಾರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):- ಸನ್ಮಾನ್ಯ ಉಪಾಧ್ಯಕ್ಷೀಣೆಯವರೇ, ಮುಂಜಾನೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದಂಥ ಸುದ್ದಿ ಸಮಾಚಾರದಲ್ಲಿ ಈ ಸದನದಲ್ಲಿ ಪ್ರಶ್ನೆಯನ್ನು ಎತ್ತಿದ್ದರು. ಹೆಗ್ಗಡದೇವನಕೋಟೆಯಲ್ಲಿ ಒಬ್ಬ ಹೆಣ್ಣುಮಗಳು ನೀರು ಇಲ್ಲದೆ ಸತ್ತಿದ್ದಾರೆ ಎನ್ನುವುದನ್ನು ಹೇಳಿದರು. ಈಗಾಗಲೇ ನಾನು ಫ್ಯಾಕ್ಸ್‌ನ್ನು ಟೆಲಿಫೋನ್ ಮುಖಾಂತರ ತರಿಸಿಕೊಂಡಿದ್ದೇನೆ. ಸಂಬಂಧಪಟ್ಟ ಡಿ. ಸಿ. ಯವರ ಜೊತೆಯಲ್ಲಿ ಮಾತನಾಡಿದ್ದೇನೆ, ಆ ವಿವರ ಈ ರೀತಿಯಾಗಿದೆ.

"The following are the facts about the death of the tribal girl in Anagatti Radi in H. D. Kote Taluk, Mysore District.

The deceased belongs to the Jenukuruba tribe. She is said to have died on 26-1-1992. The cause of death as ascertained was due to high temperature and bleeding and not due to thirst.

There are 14 to 145 families living in huts close in Anagatti village of H. D. Kote Taluk. These people are Nomadic and continuously move from place to place. They generally encroach forest lands. They are engaged in the collection of honey, teakwood seeds and other forest products. These 15 families came to the present settlement 6 months ago.

The deceased Kalamma was physically handicapped girl and did not die because of water scarcity, but because of fever and bleeding. The village Anagatti itself is nearby and water is available in that village from a borewell. Besides water was available in all the huts when the death occurred. At that time Kalamma was only one left behind and all other including children and elders had gone out.

ಈ ರೀತಿ ಮಾಹಿತಿ ಬಂದಿದೆ, ಅದಕ್ಕಾಗಿ ಈ ಒಂದು, nomadic tribe ಅಡ್ಡಾಡುತ್ತಿದ್ದುದರಿಂದ ಮತ್ತು ಆಕೆ ಹ್ಯಾಂಡಿಕ್ಯಾಪ್ಡ್ ಇರುವುದರಿಂದ, ನೀರನ್ನು ಬೇಕಾದಾಗ ಕೊಡತಕ್ಕವರು ಯಾರೂ ಕೂಡ ಇರಲಿಲ್ಲ, ಆದರೂ ಸತ್ತಿದ್ದು ಫಿವರ್‌ನಿಂದ ಮತ್ತು ಬ್ಲೀಡಿಂಗ್‌ನಿಂದ ಎಂದು ನಮಗೆ ಮಾಹಿತಿ ಬಂದಿದೆ. ಅದನ್ನು ಸದನದ ಮುಂದೆ ಇಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್:- ಈ ವರದಿ ಬಗ್ಗೆ ನನಗೆ ಅನುಮಾನಗಳು ಇವೆ. ದಯಮಾಡಿ ಸದನದ ಸಮಿತಿಯನ್ನು ಕಳುಹಿಸಿ, ಇಲ್ಲ, ಕೂಡಲೇ ಸಮಗ್ರವಾದ ತನಿಖೆ ಮಾಡಿ. ಈ ವರದಿಯನ್ನು ಅಧಿಕಾರಿಗಳು ಕೊಟ್ಟಿದ್ದಾರೆ ತಾವು ಓದಿದ್ದೀರಿ. ನಾನು ಮಾನ್ಯ ಮಂತ್ರಿಗಳನ್ನಾಗಲೀ, ಸರ್ಕಾರವನ್ನಾಗಲೀ ದೂಷಣೆ ಮಾಡುತ್ತಾ ಇಲ್ಲ. ಈ ವರದಿ ಬಗ್ಗೆ ಅನುಮಾನ ಇದೆ. ನಾಳೆ ದಿವಸ ಸಮರ್ಥರಾದವರನ್ನು ಅಲ್ಲಿಗೆ ಕಳುಹಿಸಿ, ಏನು ನಡೆದಿದೆ, ಏನು ವಿಚಾರ ಎನ್ನುವುದನ್ನು ಸ್ಥಳಪರಿಶೀಲನೆ ಮಾಡಿ, ವರದಿ ಕೊಡಲಿ. ನೀವು ಫೋನ್ ಮಾಡಿದ್ದೀರಿ, ಅಧಿಕಾರಿಗಳನ್ನು ಕಳುಹಿಸಿದ್ದೀರಿ, ನಿಜ. ಆದರೆ, ಹಿಂದೆ ಕೂಡ ಅದೇ ಸ್ಥಳದಲ್ಲಿ ಅನೇಕ ಜನ ಸತ್ತಿರುವುದು ತಮಗೆ ಬಂದಿದೆ. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಆಹಾರವಿಲ್ಲದೆ ಸತ್ತಿರತಕ್ಕಂತಾದ್ದು ಅನೇಕ ಪತ್ರಿಕೆಗಳಲ್ಲಿ ಬಂದಿದೆ; ಮತ್ತು ಪ್ರತ್ಯಕ್ಷವಾಗಿಯೂ ನೋಡಿದ್ದೇವೆ. ಇದನ್ನು ಮುಚ್ಚಿಹಾಕುವಂಥ ತಂತ್ರ ನಡೆದಹಾಗೆ ಇದೆ ಎಂದು ನನಗನಿಸುತ್ತದೆ. ದಯಮಾಡಿ, ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಕೂಡಲೇ ಸಮರ್ಥರಾದ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ, ತನಿಖೆ ಮಾಡಿ, ಏನು ನಡೆದಿದೆ ಎಂಬ ವಾಸ್ತವಾಂಶ ಕೊಡಲಿ. ಇದರಲ್ಲಿ ರಾಜಕೀಯ ಮಾಡುವಂಥ ಉದ್ದೇಶ ನನಗಿಲ್ಲ, ಪರಿಸ್ಥಿತಿ ಏನಿದೆ ಎನ್ನುವುದನ್ನು ತಮಗೆ ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೇ, ತಮಗೆ ಗೊತ್ತಿದೆ, ಈ ಸಲ ಮೈಸೂರಿನಲ್ಲಿ ಎಷ್ಟು ಹೆಚ್ಚು ಮಳೆಯಾಯಿತು....

ಶ್ರೀ ಪಿ.ಜಿ.ಆರ್. ಸಿಂಧ್ಯ:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್‌ರವರು ಸದನದಲ್ಲಿ ಬೆಳಿಗ್ಗೆ ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ ತಕ್ಷಣ, ಸರ್ಕಾರದ ಮಾನ್ಯಮಂತ್ರಿಗಳಾದ ಮೊಯ್ಲಿಯವರು ನಮಗೆ ಭರವಸೆ ಕೊಟ್ಟಿದ್ದರು. ಇದನ್ನು ದೂರವಾಣಿ ಮೂಲಕ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಮಾತನಾಡಿ, ವಿಷಯ ಸಂಗ್ರಹಣೆ ಮಾಡಿ ನಮಗೆಲ್ಲರಿಗೂ ತಿಳಿಸಿದ್ದಾರೆ, ನಾನು ಒಪ್ಪುತ್ತೇನೆ. ಸರ್ಕಾರದವರು ತಕ್ಷಣ ಕೆಲಸ ಮಾಡಿದ್ದಾರೆ. ಒಂದು ಏನಾಗಿದೆ ಎಂದರೆ, ವಾಟಾಳ್ ನಾಗರಾಜ್‌ರವರ ಕಳಕಳಿಯಾಗಲೀ ಅಥವಾ ನಮ್ಮದಾಗಲೀ, ಕಳೆದ 5-6 ತಿಂಗಳೊಳಗೆ ಹೆಗ್ಗಡದೇವನ ಕೋಟೆಯಲ್ಲಿ, ಕೆಲವು ಟ್ರೈಬ್ಯುನಲ್ ಕಾಲೋನಿಗೆ ನಾನು ಸಹಿತ ಹೋಗಿದ್ದೇನೆ. ದಡದಹಳ್ಳಿ ಎಂಬ ಗ್ರಾಮಕ್ಕೂ ಸಹಿತ ಹೋಗಿ ಬಂದಿದ್ದೇನೆ. ನಿಜವಾಗಿಯೂ ಸಹಿತ ಗುಡ್ಡಪ್ರದೇಶದಲ್ಲಿರತಕ್ಕ ಜನರಿಗೆ ಕರಂಟ್ ಇಲ್ಲ, 10-15 ಮೈಲಿ ಕಾಡಿನಲ್ಲಿ ಸೇರಿಕೊಂಡು ಬಿಟ್ಟಿದ್ದಾರೆ. ಅಲ್ಲಿ ಒಂದು ಬೋರ್‌ವೆಲ್ ಇಲ್ಲ, ಅಥವಾ ಇರತಕ್ಕ ಬೋರ್‌ವೆಲ್ ಕೆಟ್ಟುಹೋದರೆ, ರಿಪೇರಿ ಮಾಡುವುದಕ್ಕೆ 3-4 ತಿಂಗಳಾಗುತ್ತದೆ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ, ಗುಡ್ಡಗಾಡು ಪ್ರದೇಶದ ಮತ್ತು ಜಾಗದಿಂದ ಜಾಗಕ್ಕೆ ಹೋಗುತಕ್ಕವರು ಬಹಳ ಜನ ಇದ್ದಾರೆ. ನಮ್ಮ ಕಡೆ ಇವರನ್ನು ಅಕ್ಕಿ-ಪಿಕ್ಕಿ ಜನ ಎಂದು ಹೇಳುತ್ತಾರೆ. ಆದ್ದರಿಂದ ಒಬ್ಬ ಸಮರ್ಥರಾದ ಅಧಿಕಾರಿಗಳನ್ನು ಕಳುಹಿಸಿ, ವಿಚಾರಣೆ ಮಾಡಿಸುವುದರ ಜೊತೆಗೆ, ಅಲ್ಲಿ ವಿಶೇಷವಾಗಿ ಏನೋ ಇದ್ದಹಾಗೆ ಕಾಣುತ್ತದೆ. ಆಹಾರ ಇಲ್ಲದೆ ಸತ್ತುಹೋದರು, ಅಲ್ಲಿ ಅಂಗನವಾಡಿಗಳು ಇಲ್ಲ, ಅಲ್ಲಿ ಇದಕ್ಕೆ ಒಂದು ಫಾರಂ ಮಾಡಬೇಕೆಂದು ಹೇಳಿದರು. ಈ ರೀತಿ ಅನೇಕ ವರದಿಗಳು ಬರತಕ್ಕ ಹಿನ್ನೆಲೆಯಲ್ಲಿ ಇದರ ಬಗ್ಗೆ ಸ್ವತಃ ಆಸಕ್ತಿ ವಹಿಸಿ, ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮನ್ನು ಒತ್ತಾಯಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷರೇ, ಅದಕ್ಕೇ ನಾನು ಹೇಳುತ್ತಿದ್ದೆ, ಕೇವಲ ದೂರವಾಣಿ ಮೂಲಕ ಅಲ್ಲದೆ, ಸ್ವತಃ ಡಿ.ಸಿ. ಅವರೇ ಬಂದಿದ್ದರು, ನಾನು ಮೀಟಿಂಗ್‌ಗೆ ಕರೆಸಿದ್ದೆ. ಫ್ಲಡ್ ಹೆವಾಕ್‌ನಲ್ಲಿ ಏನೇನು ಮಾಡಿದ್ದೀರಿ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ರಿಪೀಟೆಡ್‌ಲಿ 15 ದಿವಸ, ತಿಂಗಳಿಗೆ ಮೀಟಿಂಗ್ ಕರೆಯುತ್ತಿರುತ್ತೇನೆ. ಕೆಲವು ಮನೆಗಳನ್ನು ಕಟ್ಟಿಸತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಈಗಲೂ ಅದಕ್ಕೇ ಕರೆದಿದ್ದೆ. ಡಿ. ಸಿ. ಅವರು ಬಂದಿದ್ದರು, ಅವರ ಜೊತೆ ಮಾತನಾಡಿದೆ. ಅವರೂ ಕೂಡಾ ಇದೇ ಹೇಳಿದರು. ತಮಗೂ ಕೂಡಾ ಗೊತ್ತಿದೆ, ಮೈಸೂರು ಜಿಲ್ಲೆಯಲ್ಲಿ ಹೆಚ್ಚಿನ ಮಳೆಯಾಗಿ ಎಲ್ಲಾ ಕಡೆ ತೊಂದರೆಯಾಗಿದೆ. ಇದು ಮಾನ್ಯ ವಾಟಾಳ್ ನಾಗರಾಜ್‌ರವರಿಗೂ ಗೊತ್ತು. ಎಲ್ಲರಿಗೂ ಗೊತ್ತು. ಫ್ಲಡ್ ಡ್ಯಾಮೇಜ್‌ನಿಂದ ರೋಡ್ಸ್ ಕೆಟ್ಟುಹೋಗಿದೆ, ಮನೆಗಳು

ಬಿದ್ದು ಹೋಗಿದೆ, ಕ್ರಾಪ್ ಡ್ಯಾಮೇಜ್ ಆಗಿದೆ, ಅದುದರಿಂದ ಸ್ಕೇರ್ಸಿಟಿ ಆಫ್ ವಾಟರ್ ಪ್ರಶ್ನೆ ಬರುವುದಿಲ್ಲ, ಆದರೆ ಪರ್ಟಿಕ್ಯುಲರ್ ಆಗಿ ಇಲ್ಲಿ ಬಂದಿರತಕ್ಕಂಥ ಜಾಗದಲ್ಲಿ, ಆ ಸ್ಪಾಟ್‌ನಲ್ಲಿ ಬೋರ್‌ವೆಲ್ ಇಲ್ಲದ ಕಾರಣ, ನೀರು ಇಲ್ಲದ ಕಾರಣ, ಅದರ ಕೊರತೆ ಇದ್ದ ಕಾರಣ ಮಗು ಸತ್ತು ಹೋಗಿದೆಯೇ ಎಂದು ಅದರ ಬಗ್ಗೆ ಕೇಳಿದೆ. ಫ್ಲಡ್ ಡ್ಯಾಮೇಜ್ ಆಗಿದೆ ಎಂದು ಹೇಳಿ ಎಲ್ಲಾ ಕಡೆ ನಾವು ಕೇಳುತ್ತಿದ್ದೇವೆ, ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಹಣ ಕೇಳುತ್ತಿದ್ದೇವೆ. ಕೋಟ್ಯಾಂತರ ರೂಪಾಯಿ ಹಣ ನಾವು ಕೊಡುತ್ತಿದ್ದೇವೆ, ವಾಸ್ತವಾಂಶ ಏನು ಎಂದು ಕೇಳಿದ್ದರೆ ಅವರು ಈ ರೀತಿಯಾಗಿಯೇ ಹೇಳಿದ್ದಾರೆ. ನಾನು ಈ ರೀತಿ ಹೇಳಿದ್ದೇನೆ. ಪುನಃ ತಾವು ಹೇಳುತ್ತಿದ್ದೀರಿ, ಅವರ ಸಮಸ್ಯೆ ಬಹಳ ಗಂಭೀರ ಇದೆ, ಪರ್ಟಿಕ್ಯುಲರ್ ಆಗಿ ಬೆಟ್ಟಗುಡ್ಡಗಳಲ್ಲಿ ಏನಿದ್ದಾರೆ, ಹಣಸೂರು, ಹೆಗ್ಗಡದೇವನ ಕೋಟೆ, ಈ ಬೆಲ್ಟ್, ಪಿರಿಯಾಪಟ್ಟಣ ಹಾಗು ಕೂರ್ಗ್ ಸಹ ಇದರಲ್ಲಿ ಬರುತ್ತದೆ, ಈ ಭಾಗದಲ್ಲಿ ಪರ್ಟಿಕ್ಯುಲರ್‌ಲಿ ಜೇನು ಕುರುಬರು ಏನಿದ್ದಾರೆ, ಅವರ ಒಂದು ಸಮಸ್ಯೆ ಬಹಳ ಗಂಭೀರವಾಗಿದೆ. ಈ ಸಮಸ್ಯೆಯನ್ನು ನಮ್ಮ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರೂ ನೋಡಿಕೊಂಡು ಕಾರ್ಯಕ್ರಮ ಹಾಕಿಕೊಂಡು ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ಈ ವರದಿ ಸರಿಯಲ್ಲ ಎಂದು ಅನಿಸಿದರೆ ಪುನಃ ನಾನು ನೋಡುತ್ತೇನೆ. ನಾನು ಡಿ. ಸಿ. ಅವರು ಹೇಳಿದಮೇಲೆ ಹೇಳುತ್ತಿದ್ದೇನೆ. ಟೆಲಿಫೋನಿನಲ್ಲಿ ಆಯಿತು, ಖುದ್ದಾಗಿ ಅವರು ಬಂದಿದ್ದರು, ಅವರನ್ನು ಕೇಳಿಕೊಂಡು ಅವರು ಹೇಳಿದ್ದನ್ನು ಹೇಳುತ್ತಿದ್ದೇನೆ. ಪುನಃ ಇನ್ನೊಮ್ಮೆ ಎಲ್ಲವನ್ನೂ ಕೇಳಿಕೊಂಡು ವರದಿಯನ್ನು ತರಿಸುತ್ತೇನೆ.

ಉಪಾಧ್ಯಕ್ಷರು:- ಶಿವರಾಮೇಗೌಡರೇ ಇನ್ನು 5-10 ನಿಮಿಷ ಮಾತನಾಡಿ.

ಶ್ರೀ ಖಮರುಲ್ ಇಸ್ಲಾಂ:- ಪ್ರೈವೇಟ್ ಮೆಂಬರ್ಸ್ ಬಿಲ್ ಇದೆ.

ಉಪಾಧ್ಯಕ್ಷರು:- ಶಿವರಾಮೇಗೌಡರು 5-10 ನಿಮಿಷ ಮಾತನಾಡುತ್ತಾರೆ.

ಶ್ರೀ ಬಿ.ಪೆಚ್. ಬನ್ನಿ ಕೋಡ್:- ಪ್ರೈವೇಟ್ ಮೆಂಬರ್ಸ್ ಬಿಲ್ ತೆಗೆದುಕೊಳ್ಳುವ ವಿಚಾರ ಏನಾಯಿತು?

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದು)

ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ):- ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತಾ, ನನಗೆ ಕೊನೆಯಲ್ಲಿ ಮಾತನಾಡತಕ್ಕಂಥ ಅವಕಾಶ ಕೊಟ್ಟ ತಮಗೆ ವಂದಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಕಾವೇರಿ ಜಲ ವಿವಾದದ ಪ್ರಶ್ನೆಯನ್ನು ನಮೂದಿಸಿದ್ದಾರೆ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಕಾವೇರಿ ವಿಚಾರದಲ್ಲಿ ಚರ್ಚೆಗೆ ಪ್ರತ್ಯೇಕವಾಗಿ ಸಮಯ ಗೊತ್ತು ಮಾಡುತ್ತೇವೆಂದು ಹೇಳಿರತಕ್ಕಂಥ ಸಂದರ್ಭದಲ್ಲಿ ನಾನು ಪೂರ್ಣ ವಿಚಾರಕ್ಕೆ ಹೋಗದೆ ನಾನು ಮೊನ್ನೆ ಪ್ರಶ್ನೋತ್ತರದ ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಕಾವೇರಿ ಜಲಾನಯನ ಪ್ರದೇಶಕ್ಕೆ ಒಂದು ಪ್ರಾಧಿಕಾರ ರಚಿಸಿ ಎಂದು ಕೇಳಿದ್ದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಕೆಲಸ ಕಾರ್ಯಗಳು ಸ್ಥಗಿತವಾಗಿದೆ. ಎಷ್ಟೋ ಸ್ಪಾಟ್‌ನಲ್ಲಿ ಕೆಲಸ ನಡೆಯುತ್ತಿಲ್ಲ, ಅದಕ್ಕಾಗಿ ರಾಜ್ಯಕ್ಕೆ ಸೀಮಿತವಾದ ಹಾಗೆ ಕಾವೇರಿ ಕಣಿವೆ ಪ್ರದೇಶಕ್ಕೆ ಒಂದು ಪ್ರಾಧಿಕಾರವನ್ನು ರಚಿಸಿದರೆ ಒಳ್ಳೆಯದು ಎಂದು ಹೇಳುತ್ತೇನೆ. ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ಚಟ್ಟಮ್ಮನೆರೆ ಹತ್ತಿರ ಒಂದು ಸುರಂಗ ಇದೆ. ಅದರ ಕೆಲಸ ನಿಂತು ಹೋಗಿದೆ. ಸುಮಾರು ಅದನ್ನು ತನಿಖೆ ಮಾಡುತ್ತೇವೆ ಎಂದು ಹೇಳಿ, ತನಿಖೆ ಮಾಡಿಲ್ಲ, ಅದರ ಕೆಲಸವನ್ನೂ ಪೂರ್ಣ ಮಾಡಿಲ್ಲ, ಚಟ್ಟವರ್‌ಗೆರೆ ಸುರಂಗ ಆಗದೇಹೋದರೆ ನಾಗಮಂಗಲ ತಾಲ್ಲೂಕಿನಲ್ಲಿ 25 ಸಾವಿರ ಎಕರೆ ನೀರಾವರಿ ಆಗತಕ್ಕಂಥ ಕೆಲಸ ಒಂದು ವರ್ಷ ಮುಂದಕ್ಕೆ ಹೋಗುತ್ತದೆ. ಇದು ಒಂದು ತೊಂದರೆ. ಇನ್ನು ಬಾಗೂರು ನವಿಲೆ ಸುರಂಗ ಮಾರ್ಗದಲ್ಲಿ "ವೈ ಅಲೈನ್‌ಮೆಂಟ್" ಬಗ್ಗೆ ತೀರ್ಮಾನ ಕೊಡುವುದಕ್ಕೆ ಸರಕಾರ ನಿಧಾನ ಮಾಡುತ್ತಿವೆ. ಇದರ ಬಗ್ಗೆ ಸರಕಾರ ಬೇಗ ತೀರ್ಮಾನ ಕೊಡಬೇಕು, ಆರು ತಿಂಗಳಾದರೂ ಬಿಡುಗಡೆಯಾಗಿಲ್ಲ, ಇನ್ನೂ ಎಷ್ಟು ಕಾಲ ಹಿಡಿಯುತ್ತದೆ ಗೊತ್ತಿಲ್ಲ, ಇವೆಲ್ಲದರ ಹಿನ್ನೆಲೆಯಲ್ಲಿ ಕ್ವಿಕ್ ಡಿಸಿಷನ್ ತೆಗೆದುಕೊಳ್ಳುವುದಕ್ಕೆ, ಪ್ರತಿ ತಿಂಗಳೂ ಎಷ್ಟು ಕೆಲಸ ಆಗಬೇಕೆಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಈ ಕಾವೇರಿ ಜಲಾನಯನ ಪ್ರದೇಶಕ್ಕೆ ಒಂದು ಪ್ರಾಧಿಕಾರ ರಚನೆ ಮಾಡಬೇಕು. ರಾಜ್ಯಪಾಲರ ಭಾಷಣದಲ್ಲಿ ಕೃಷ್ಣಾ ಯೋಜನೆಗೆ ಒಂದು ಪ್ರಾಧಿಕಾರ ರಚನೆ ಮಾಡುತ್ತೇವೆಂದು ಹೇಳಿದ್ದಾರೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಸರಕಾರಕ್ಕೆ ಒತ್ತಾಯ ಮಾಡುತ್ತೇನೆ, ಕಾವೇರಿ ಕಣಿವೆಗೂ ಸಹಿತ ಒಂದು